# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯ, ವಾರ್ಡ್ ಸಂಖ್ಯೆ 70ರಲ್ಲಿ ದಿನಾಂಕ:22/05/2020ರಂದು ನಡೆದ ವಾರ್ಡ್ ಸಮಿತಿ ಸಭಾ ನಡವಳಿಕೆಗಳು**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. **ಶ್ರೀಮತಿ ಪದ್ಮಾವತಿ ನರಸಿಂಹಮೂರ್ತಿ**(ಬಿ.ಬಿ.ಎಂ.ಪಿ ಸದಸ್ಯರು, ವಾರ್ಡ್ 70 ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ).
2. ಶ್ರೀಮತಿ ಲಕ್ಷ್ಮಮ್ಮ, ಸದಸ್ಯರು.
3. ಶ್ರೀಮತಿ ಶಿಲ್ಪ, ಸದಸ್ಯರು.
4. ಶ್ರೀಮತಿ ಉಮ, ಸದಸ್ಯರು.
5. ಶ್ರೀ ತಿಮ್ಮೇಗೌಡ, ಸದಸ್ಯರು.
6. ಶ್ರೀ ಬಸವರಾಜು, ಸದಸ್ಯರು.
7. ಶ್ರೀ ಎಸ್.ಕೆ ಹೇಮಂತ್ ಕುಮಾರ್, ಸಹಾಯಕ ಅಭಿಯಂತರರು, ವಾರ್ಡ್‌ನಂ–70
8. ಶ್ರೀ ಕೆ.ಶಿವಲಿಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ 70,
9. ಶ್ರೀ ವೆಂಕಟರಾಯಪ್ಪ, ಕಲ್ಯಾಣ ಇಲಾಖೆ, ದಾಸರಹಳ್ಳಿ ವಲಯ,
10. ಸಿದ್ದರಾಜು, ಸಹಾಯಕ ಅಭಿಯಂತರರು, ಬೆಸ್ಕಾಂ ಕಾಮಾಕ್ಷಿಪಾಳ್ಯ.
11. ಶ್ರೀಮತಿ ಕೆ ಎಸ್ ಸುಧಾಮಣಿ, ಪಶುವೈದ್ಯ, ಇಲಾಖೆ, ದಾಸರಹಳ್ಳಿ ವಲಯ,

ಈ ಸಭೆಗೆ ಹಾಜರಾಗಿರುವ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಹಾಗೂ ಅಧಿಕಾರಿ/ಸಿಬ್ಬಂದಿ ರವರುಗಳಿಗೆ ಕಾರ್ಯದರ್ಶಿಗಳು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಅಧ್ಯಕ್ಷರಾದ ಶ್ರೀಮತಿ ಪದ್ಮಾವತಿ ನರಸಿಂಹಮೂರ್ತಿ ರವರು ಮಾತನಾಡುತ್ತಾ, ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರಿಗಳೊಂದಿಗೆ ವಾರ್ಡಿಗೆ ಸಂಬಂಧಿಸಿದ ಸಮಸ್ಯೆಗಳು, ಅಭಿವೃದ್ಧಿ ಕೆಲಸಗಳು ಹಾಗೂ ವಾರ್ಡಿನ ಇತರೆ ಕುಂದುಕೊರತೆಗಳ ಬಗ್ಗೆ ಚರ್ಚಿಸಿದರು.

1. **ಶ್ರೀಮತಿ ಶಿಲ್ಪಾ ವಾರ್ಡ್ ಸಮಿತಿ ಸದಸ್ಯರು;** ಕಪಿಲಾನಗರ, ಐ.ಪಿ ನಗರ ಮತ್ತು ಅನ್ನಪೂರ್ಣೇಶ್ವರಿ ನಗರದಲ್ಲಿ ರಸ್ತೆ ಪಕ್ಕದ ಮೋರಿಗಳಲ್ಲಿ ಮಣ್ಣು ತುಂಬಿಕೊಂಡಿದ್ದು, ಮಳೆ ಬಂದಾಗ ಮಳೆಯ ನೀರು ರಸ್ತೆಯ ಮೆಲ್ಭಾಗದಲ್ಲಿ ಹರಿದು ರಸ್ತೆಗಳಲ್ಲಿ ಗುಂಡಿಗಳಾಗಿರುತ್ತವೆ ಎಂಬುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಶ್ರೀ ಎಸ್.ಕೆ ಹೇಮಂತ್ ಕುಮಾರ್ ಸಹಾಯಕ ಅಭಿಯಂತರರವರು ಸ್ಥಳ ಪರಿಶೀಲಿಸಿ ತುರ್ತಾಗಿ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

2. **ಶ್ರೀ ಬಸವರಾಜು ವಾರ್ಡ್ ಸಮಿತಿ ಸದಸ್ಯರು;** ಕೋವೀಡ್–19 ಹರಡುತ್ತಿರುವ ಬಗ್ಗೆ ವಾರ್ಡ್ ವ್ಯಾಪ್ತಿಯಲ್ಲಿ ಔಷಧಿ ಸಿಂಪಡಣೆ ಮಾಡಲು ಅಧ್ಯಕ್ಷರಿಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಶಿವಲಿಂಗಯ್ಯ ರವರು ಮಾತಾನಾಡಿ ಔಷಧಿಯನ್ನು ಸಿಂಪಡಿಸಲಾಗುತ್ತದೆ ಎಂಬುದಾಗಿ ತಿಳಿಸಿದರು.

3. **ಶ್ರೀ ತಿಮ್ಮೇಗೌಡ ವಾರ್ಡ್ ಸಮಿತಿ ಸದಸ್ಯರು;** ಎ.ಎಸ್.ಬಿ ಬಡಾವಣೆ, ಶ್ರೀಗಂಧನಗರ 4ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ನೀರು ಮೋರಿಯಲ್ಲಿ ಹರಿಯುತ್ತಿದ್ದು, ಇದರಿಂದ ಕೆಟ್ಟ ವಾಸನೆ ಬರುತ್ತಿದೆ ಎಂಬುದಾಗಿ ಈ ರಸ್ತೆಯ ನಿವಾಸಿಗಳು ತಿಳಿಸಿರುತ್ತಾರೆ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸುವಂತೆ ತಿಳಿಸಿರುತ್ತಾರೆ.

4. **ಶ್ರೀಮತಿ ಉಮಾ ವಾರ್ಡ್ ಸಮಿತಿ ಸದಸ್ಯರು:** ಸ್ತ್ರೀ ಶಕ್ತಿ ಗುಂಪುಗಳಿಗೆ ಬಿಬಿಎಂಪಿ ಕಲ್ಯಾಣ ಇಲಾಖೆಯಿಂದ ಸಹಾಯಧನವನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು ಕಲ್ಯಾಣ ಇಲಾಖೆಯವರು ಮಾತಾನಾಡಿ ಸಂಘಕ್ಕೆ ಸಂಬಂಧಪಟ್ಟ ದಾಖಲೆಗಳೊಂದಿಗೆ ತಮ್ಮ ಕಛೇರಿಗೆ ನೀಡಲು ತಿಳಿಸಿರುತ್ತಾರೆ.

**ಶ್ರೀಮತಿ ಪದ್ಮಾವತಿ ನರಸಿಂಹಮೂರ್ತಿ, ವಾರ್ಡ್ ಅಧ್ಯಕ್ಷರು**: ಅಂತಿಮವಾಗಿ ಸಭೆಯಲ್ಲಿ ಮಾತನಾಡಿ ಎಲ್ಲಾ ಇಲಾಖೆಯ ಅಧಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಹಾಗೂ ದೂರುಗಳನ್ನು ತುರ್ತಾಗಿ ಬಗೆಹರಿಸಿ ಮುಂಬರುವ ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸುವಂತೆ ತಿಳಿಸಿರುತ್ತಾರೆ.

**ಅಂ**ತಿಮವಾಗಿ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದ ಮಾನ್ಯ ಅಧ್ಯಕ್ಷರು, ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಸಮಿತಿಯ ಕಾರ್ಯದರ್ಶಿರವರ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರ ಸಹಿ

(ಶ್ರೀಮತಿ ಪದ್ಮಾವತಿ ನರಸಿಂಹಮೂರ್ತಿ),
ಬಿ.ಬಿ.ಎಂ.ಪಿ, ಸದಸ್ಯರು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ನಂ.70, ರಾಜಗೋಪಾಲನಗರ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು,

1. ಮಾನ್ಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ ದಾಸರಹಳ್ಳಿ ವಲಯ ರವರಿಗೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಗ್ಗನಹಳ್ಳಿ ಉಪವಿಭಾಗ ರವರಿಗೆ.
4. ಸಹಾಯಕ ಅಭಿಯಂತರರು(ವಾರ್ಡ್ ನಂ–70) ರವರಿಗೆ.
5. ಆರೋಗ್ಯಧಿಕಾರಿ, ದಾಸರಹಳ್ಳಿವಲಯ ರವರಿಗೆ.
6. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ–70 ರವರಿಗೆ.
7. ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣಧಿಕಾರಿಗಳು), ವಲಯ ಕೇಂದ್ರ, ದಾಸರಹಳ್ಳಿ ರವರಿಗೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, BWSSB ರವರಿಗೆ,
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾ, ಜಿ.ಕೆ.ಡಬ್ಲೂ ಬಡಾವಣೆ, ರವರಿಗೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಜನಪ್ರಿಯ ಸುಂಕದಕಟ್ಟೆ, ರವರಿಗೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿದೀಪಗಳ ನಿರ್ವಹಣೆ ವಿಭಾಗ, ದಾಸರಹಳ್ಳಿ ವಲಯ ರವರಿಗೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಉದ್ಯಾನವನ ನಿರ್ವಹಣೆ ವಿಭಾಗ, ದಾಸರಹಳ್ಳಿ ವಲಯ ರವರಿಗೆ.
13. ಪಶುಸಂಗೋಪನ ಇಲಾಖೆ ವಲಯ ಕೇಂದ್ರ, ದಾಸರಹಳ್ಳಿ ರವರಿಗೆ.
14. ಕಲ್ಯಾಣ ಇಲಾಖೆ, ದಾಸರಹಳ್ಳಿ ವಲಯ ರವರಿಗೆ.
15. ಅರಣ್ಯ ಇಲಾಖೆ, ದಾಸರಹಳ್ಳಿ ವಲಯ ರವರಿಗೆ.
16. ಎಲ್ಲಾ ವಾರ್ಡ್ ಸಮಿತಿ ಸದಸ್ಯರಿಗೆ.
17. ಕಛೇರಿ ಕಡತಕ್ಕೆ.